ಮೂಲಕ ಉತ್ತರಿಸುವ 55 ಪ್ರಶ್ನೆಗಳ ಪೈಕಿ 47 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ದಿನಾಂಕ 30–06–2010ರ 3ನೇ ಪಟ್ಟಿಯಿಂದ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಉತ್ತರಗಳನ್ನು ಮತ್ತು ಲಿಖಿತ ಮೂಲಕ ಉತ್ತರಿಸುವ 39 ಪ್ರಶ್ನೆಗಳ ಪೈಕಿ 36 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದ ಮುಂದೆ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಯಿತು. ಅನುಬಂಧ (ಅ)

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು:

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)(ಮುಖ್ಯಮಂತ್ರಿಯವರ ಪರವಾಗಿ):

(i) ಭಾರತ ಸಂವಿಧಾನ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2009ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರ ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ (ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು) ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

(ii) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್ 2009ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ನಿಯಂತ್ರಕರು ಮತ್ತು ಮಹಾಲೆಕ್ಕ ಪರಿಶೋಧಕರು ನೀಡಿರುವ ಮಾಹಿತಿ ವ್ಯವಸ್ಥೆಗಳ ಲೆಕ್ಕಪರಿಶೋಧನೆ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು):

I ಶ್ರೀ ಬಿ.ಎಸ್.ಯಡಿಯೂರಪ್ಪ, ಮಾನ್ಯ ಮುಖ್ಯಮಂತ್ರಿಗಳ ಪರವಾಗಿ:–

(iii) 1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ ಪ್ರಕರಣ 39ರ ಮೇರೆಗೆ:

1. ದಿನಾಂಕ 05.07.2002ರಂದು ಹೊರಡಿಸಲಾಗಿದ್ದ ಅಧಿಸೂಚನೆ ಸಂಖ್ಯೆ ಎಫ್‌ಡಿ 31 ಸಿಎಸ್‌ಎಲ್ 2002 ರಲ್ಲಿ ವಿವರಿಸಿದಂತೆ ಕರ್ನಾಟಕ ಸರ್ಕಾರವು **"ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್"** ಅನ್ನು ಒಂದು **ತೈಲ ಕಂಪನಿ** ಎಂದು ನಿರ್ದಿಷ್ಟ ಉದ್ದೇಶಕ್ಕಾಗಿ ಪರಿಗಣಿಸಲು ದಿನಾಂಕ 24.03.2010ರಂದು ಹೊರಡಿಸಲಾಗಿರುವ ಎಫ್‌ಡಿ 50 ಸಿಎಸ್‌ಎಲ್ 2010ರ ಅಧಿಸೂಚನೆ.

2. ಕರ್ನಾಟಕ ರಾಜ್ಯದಲ್ಲಿ ಮೀನುಗಾರಿಕೆಗೆ ಸಂಬಂಧಪಟ್ಟಂತೆ ಮೀನುಗಾರರು ಮೀನುಗಾರಿಕೆ ಚಟುವಟಿಕೆಗಳಿಗೆ ಬಳಸುವ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು 2010–11ನೇ ಆರ್ಥಿಕ ವರ್ಷಕ್ಕೆ ಸಂಬಂಧಿಸಿದಂತೆ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(1) ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಅಧಿನಿಯಮ ಕಲಂ 89ರ ಮೇರೆಗೆ:

1. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ದಿನಾಂಕ 01.04.2010ರಿಂದ 30.06.2010ರವರೆಗೆ ಔಷಧ ಮತ್ತು ಔಷಧ ವಸ್ತುಗಳ ಮಾರಾಟದ ಮೇಲೆ ಶೇ.4ರಷ್ಟು ತೆರಿಗೆಯನ್ನು ಕಡಿತಗೊಳಿಸುವ ಬಗ್ಗೆ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 94 ಸಿಎಸ್‌ಎಲ್ 10ನೇ ಸಂಖ್ಯೆಯ ಅಧಿಸೂಜನೆ.

2. 2003ರ ಕರ್ನಾಟಕ ಮೌಲ್ಯ ವರ್ಧಿಕ ತೆರಿಗೆ ಕಾಯ್ದೆಯಡಿ ಭತ್ತ, ಅಕ್ಕಿ, ಗೋಧಿ, ದ್ವಿದಳ ದಾನ್ಯ, ಅಕ್ಕಿ ಮತ್ತು ಗೋದಿಯ ಹಿಟ್ಟು ಹಾಗೂ ರವೆ ಮತ್ತು ಮೈದಾ ಹಿಟ್ಟು ಇವುಗಳ ಮಾರಾಟದ ಮೇಲಿನ ತೆರಿಗೆಗೆ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 31.03.2011ರವರೆಗೆ ತೆರಿಗೆ ವಿನಾಯಿತಿ ನೀಡಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(2)ನೇ ಸಂಖ್ಯೆಯ ಅಧಿಸೂಚನೆ.

3. 2003ರ ಕರ್ನಾಟಕ ಮೌಲ್ಯವರ್ಧಿತ ತೆರಿಗೆ ಕಾಯ್ದೆಯಡಿ ಈ ಕೆಳಕಂಡ ಅಧಿಸೂಚನೆಗಳನ್ನು ರದ್ದುಗೊಳಿಸಿ, ಆಯ್ದ 25 ಸಾಮಗ್ರಿಗಳಿಗೆ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಶೇ.5ರಷ್ಟು ತೆರಿಗೆ ವಿನಾಯಿತಿ ನೀಡಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(3) ನೇ ಸಂಖ್ಯೆಯ ಅಧಿಸೂಚನೆ.

1. ಎಫ್‌ಡಿ 169 ಸಿಎಸ್‌ಎಲ್ 2005, ದಿನಾಂಕ 05.07.2005
2. ಎಫ್‌ಡಿ 116 ಸಿಎಸ್‌ಎಲ್ 2006(6), ದಿನಾಂಕ 31.03.2006
3. ಎಫ್‌ಡಿ 121 ಸಿಎಸ್‌ಎಲ್ 2006, ದಿನಾಂಕ 10.05.2006

4. ಎಫ್‌ಡಿ 221 ಸಿಎಸ್‌ಎಲ್ 2006, ದಿನಾಂಕ 29.11.2006
5. ಎಫ್‌ಡಿ 166 ಸಿಎಸ್‌ಎಲ್ 2006, ದಿನಾಂಕ 11.12.2006
6. ಎಫ್‌ಡಿ 140 ಸಿಎಸ್‌ಎಲ್ 2006, ದಿನಾಂಕ 19.12.2006
7. ಎಫ್‌ಡಿ 115 ಸಿಎಸ್‌ಎಲ್ 2007(3), ದಿನಾಂಕ 30.03.2007
8. ಎಫ್‌ಡಿ 115 ಸಿಎಸ್‌ಎಲ್ 2007(3), ದಿನಾಂಕ 30.03.2007
9. ಎಫ್‌ಡಿ 115 ಸಿಎಸ್‌ಎಲ್ 2007(4), ದಿನಾಂಕ 30.03.2007
10. V ಎಫ್‌ಡಿ 192 ಸಿಎಸ್‌ಎಲ್ 2007, ದಿನಾಂಕ 23.06.2007
11. VII ಎಫ್‌ಡಿ 507 ಸಿಎಸ್‌ಎಲ್ 2007, ದಿನಾಂಕ 24.03.2008
12. IV ಎಫ್‌ಡಿ 507 ಸಿಎಸ್‌ಎಲ್ 2008, ದಿನಾಂಕ 31.07.2008
13. X ಎಫ್‌ಡಿ 63 ಸಿಎಸ್‌ಎಲ್ 2009, ದಿನಾಂಕ 30.03.2009

4. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎಸ್‌ಎಲ್ 2006(11) ದಿನಾಂಕ 31.03.2006ನ್ನು ರದ್ದುಗೊಳಿಸಿ, 01.04.2010ರಿಂದ ಜಾರಿಗೆ ಬರುವಂತೆ ವಾರ್ಷಿಕ ವಹಿವಾಟನ್ನು ರೂ.25ಲಕ್ಷಗಳಿಗೆ ಹೆಚ್ಚಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10 (4)ನೇ ಸಂಖ್ಯೆ ಅಧಿಸೂಚನೆ.

5. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅಧಿಸೂಚನೆ ಸಂಖ್ಯೆ ಎಫ್‌ಡಿ 116 ಸಿಎಸ್‌ಎಲ್ 2006(14) ದಿನಾಂಕ 31.03.2006 ಮತ್ತು ಅಧಿಸೂಚನೆ VI 63 ಸಿಎಸ್‌ಎಲ್ 2009ನ್ನು ರದ್ದುಗೊಳಿಸಿ ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಸೇನೆ ಕ್ಯಾಂಟೀನುಗಳ ಕೆಲವು ವಸ್ತುಗಳ ಮಾರಾಟಗಳ ಮೇಲೆ ಶೇ.5ರಷ್ಟು ತೆರಿಗೆಯನ್ನು ಕಡಿತಗೊಳಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10 (5) ನೇ ಸಂಖ್ಯೆಯ ಅಧಿಸೂಚನೆ.

6. 2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಕಾಯ್ದೆಯಡಿ ಅಧಿಸೂಚನೆ V ಎಫ್‌ಡಿ 182 ಸಿಎಸ್‌ಎಲ್ 2008 ದಿನಾಂಕ 31.07.2008ನ್ನು ರದ್ದುಗೊಳಿಸಿ, ಕಲಂ 4(1)ರ ಷರತ್ತುಗಳಿಗೆ ಒಳಪಟ್ಟು ಬಳಸಲಾದ ವಾಹನಗಳ

ಖರೀದಿ ಮತ್ತು ಮಾರಾಟ.ದ ಮೇಲೆ ವ್ಯಾಪಾರಿ ಪಾವತಿಸಬೇಕಾದ ತೆರಿಗೆಯನ್ನು ದಿನಾಂಕ 01.04.2010ರಿಂದ ಜಾರಿಗೆ ಬರುವಂತೆ ಕಡಿತಗೊಳಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 82 ಸಿಎಸ್‌ಎಲ್ 10(6) ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತಿದ್ದೇನೆ.

1979ರ ಕರ್ನಾಟಕ ಸರಕುಗಳ ಪ್ರವೇಶ ತೆರಿಗೆ ಕಾಯ್ದೆ 31ರ ಪ್ರಕರಣದ ಮೇರೆಗೆ:

1979ರ ಕರ್ನಾಟಕ ಸರಕುಗಳ ಪ್ರವೇಶದ ಮೇಲಿನ ತೆರಿಗೆ ಕಾಯ್ದೆಯಡಿ ನಶ್ಯೆಯನ್ನು ಹೊರತುಪಡಿಸಿ ಎಲ್ಲಾ ತಂಬಾಕು ಉತ್ಪನ್ನಗಳ ಪ್ರವೇಶದ ಮೇಲೆ ವ್ಯಾಪಾರಿಯು ಪಾವತಿಸಬೇಕಾದ ತೆರಿಗೆಯನ್ನು ದಿನಾಂದ 01.04.2010ರಿಂದ ಜಾರಿಗೆ ಬರುವಂತೆ ಶೇ.2ಕ್ಕೆ ಇಳಿಸಿ ದಿನಾಂಕ 31.03.2010ರಂದು ಹೊರಡಿಸಲಾದ ಎಫ್‌ಡಿ 86 ಸಿಎಸ್‌ಎಲ್ 2010ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ ಕಲಂ 8(3)ರ ಮೇರೆಗೆ:

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮದ ನಿಯಮಾಗಳಿಗೆ 65–ಎ ಹೊಸ ನಿಯಮ ಸೇರ್ಪಡೆಗೆ ಸಂಬಂಧಿಸಿದಂತೆ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ದಿನಾಂಕ 21.04.2010ರಂದು ಹೊರಡಿಸಲಾದ ಎಫ್‌ಡಿ 6 ಎಸ್‌ಆರ್‌ಎ 2008ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತಿದ್ದೇನೆ.

1984ರ ಕರ್ನಾಟಕ ಲೋಕಾಯುಕ್ತ ಅಧಿನಿಯಮ ಕಲಂ 23(3)ರ ಮೇರೆಗೆ:

1985ರ ಕರ್ನಾಟಕ ಲೋಕಾಯುಕ್ತ ನಿಯಮಾವಳಿ ನಿಯಮ 6ಎಗೆ ತಿದ್ದುಪಡಿ ಮಾಡಿ ದಿನಾಂಕ 15.06.2009 ಹಾಗೂ 18.06.2009ರಂದು ಹೊರಡಿಸಲಾದ ಸಿಆಸುಇ 2 ಸೇಲೋಯು 2010ನೇ ಸಂಖ್ಯೆಯ ಅಧಿಸೂಚನೆ ಮತ್ತು ತಿದ್ದುಪಡಿ ಆದೇಶವನ್ನು ಮಂಡಿಸುತ್ತಿದ್ದೇನೆ.

2005ರ ಮಾಹಿತಿ ಹಕ್ಕು ಅಧಿನಿಯಮದ ಕಲಂ 29(2)ರ ಮೇರೆಗೆ:

1. ದಿನಾಂಕ 27.11.2009ರಂದು ಹೊರಡಿಸಿರುವ ಅಧಿಸೂಚನೆ ಸಂಖ್ಯೆ ಡಿ.ಪಿ.ಎ.ಆರ್ 131 ಇಜಿಎಮ್ 2009ನ್ನು ರದ್ದುಪಡಿಸಿ, ಕೆಲವು ಅಧಿಕಾರಿಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಇ–ಆಡಳಿತ ವಿಭಾಗಕ್ಕೆ